# ಸ್ತ್ರೀ ಪ್ರಧಾನ ಸಿನಿಮಾ ಮಾಡಬೇಕು

**ದೀಪಾ ಹಿರೇಮಠ**
ಉದಯ ವಾಹಿನಿಯ
'ಆನಂದ ರಾಗ'ದ ದುರ್ಗಾ



◆ **ನಿಮ್ಮ ಓದು ಮತ್ತು ಹವ್ಯಾಸ ಹೊಂದಿಕೆ ಆಯಿತಾ?**

ಮೂಲತಃ ನಾನು ಧಾರವಾಡದವಳು. ಈಗ ಬೆಂಗಳೂರಿನಲ್ಲಿಯೇ ನೆಲೆಸಿದ್ದೇನೆ. ಬಿಬಿಎ ಮಾಡಿ ಕಾನೂನು ಪದವಿ ಓದಿದ್ದೇನೆ. 'ಮಹಾಸತಿ' ಮೂಲಕ ಧಾರಾವಾಹಿಗೆ ಪ್ರವೇಶ ಪಡೆದೆ. ಅದಾದ ಮೇಲೆ 'ಕಾವ್ಯಾಂಜಲಿ' ಮಾಡಿದೆ. ತೆಲುಗು ಧಾರಾವಾಹಿಗಳಲ್ಲೂ ನಟಿಸುತ್ತಿದ್ದೇನೆ. 'ಬ್ರಹ್ಮಾಸ್ತ್ರ' ಸೇರಿ ಕೆಲವು ಸಿನಿಮಾದಲ್ಲಿಯೂ ಮಾಡಿರುವೆ. 'ಆನಂದ ರಾಗ'ದಲ್ಲಿ ಈಗ ಹೊಸ ಬಣ್ಣ ಮೂಡಿದೆ.

ಅಮ್ಮ–ಅಪ್ಪ, ತಂಗಿ ನಾನು ಇರುವ ಕುಟುಂಬವೇ ಪ್ರಪಂಚ ಎನ್ನುವುದಾಗಿತ್ತು. ಅಂತಹದ್ದೇ ಕುಟುಂಬ ಇದರಲ್ಲಿ ಇದೆ. ಪ್ರತಿ ಸಂಬಂಧಗಳಲ್ಲೂ ಅನ್ಯೋನ್ಯತೆಯ ಬೆಸುಗೆ ಇರುತ್ತದೆ. ಯಾರಿಗೆ ಏನೇ ಸಮಸ್ಯೆ ಎದುರಾದರೂ ಅದನ್ನು ಸಮರ್ಥವಾಗಿ ನಿಭಾಯಿಸುತ್ತಾರೆ. ಪಾತ್ರಕ್ಕೆ ಒಂದು ಕಡೆ ಮುಗ್ಧತೆ ಮುಖ ಇದ್ದರೆ ಮತ್ತೊಂದು ಕಡೆ ಪ್ರಬುದ್ಧತೆ ಇದೆ. ವಿಷಾದ ವಿಷಗಳಿಗೆಯನ್ನೂ ಸೂಕ್ಷ್ಮವಾಗಿ ನಿರ್ವಹಿಸುವ ಪಾತ್ರ. ಅಪ್ಪನಿಗೆ ಐಎಎಸ್ ಮಾಡಿಸುವ ಆಸೆ ಮುಂದೆ ಏನು ಆಗುತ್ತದೆ ಎನ್ನುವುದು ಕುತೂಹಲದ ಅಂಶ.

◆ **ನಿಮ್ಮ ಕನಸಿನ ಆಯ್ಕೆ ಏನು?**

ನನಗೆ ಬಣ್ಣದ ಜೀವನ ಕನಸಾಗಿತ್ತು. ಅದನ್ನು ನನಸು ಮಾಡಿಕೊಳ್ಳುವ ಸಂಬಂಧ ಈ ಕ್ಷೇತ್ರಕ್ಕೆ ಬಂದಿದ್ದೇನೆ. ಜೀವನ ಪೂರ್ತಿ ಇಲ್ಲೇ ಇರಬೇಕು ಎನ್ನುವ ಸಂಕಲ್ಪ ನನ್ನದು. ಕೊನೆ ಕ್ಷಣದವರೆಗೂ ಮೇಕಪ್ ಹಚ್ಚಲೇಬೇಕೆಂಬ ಹಟವೂ ಇದೆ. ಬಣ್ಣದ ಲೋಕದಲ್ಲೂ ಕನಸಿನ ಗರಿಗಳು ಮೂಡಿವೆ. ಐಪಿಎಸ್ ಅಧಿಕಾರಿಯ ಪಾತ್ರವನ್ನು ಮಾಡುವ ಆಸೆ ಇತ್ತು. ಅದು ಇಲ್ಲಿ ಬಹುತೇಕ ಆಗಬಹುದು ಎಂಬ ನಿರೀಕ್ಷೆ ಇದೆ. ಇದನ್ನು ಬಿಟ್ಟರೆ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳಲು ತುಂಬಾನೇ ಇಷ್ಟ. ಸ್ವಾತಂತ್ರ್ಯ ಚಳವಳಿಯ ನೇತಾರರಳಾಗಿಯೂ ಅಭಿನಯಿಸಬೇಕು ಎನ್ನುವುದು ನನ್ನ ಬಯಕೆ. ಸಿನಿಮಾಗಳಿಗೆ ಆಡಿಷನ್, ಲುಕ್ ಟೆಸ್ಟ್ ಕೊಡುತ್ತಿದ್ದೇನೆ. ನಾನೇ ಏನಾದರೂ ಸಿನಿಮಾ ರೂಪಿಸಿದರೆ, ಮಹಿಳಾ ಪ್ರಧಾನ ಕಥೆ ಮಾಡಬೇಕು ಎನ್ನುವ ಆಸೆ ಇದೆ. ನನ್ನ ಆ ಕಥೆಗೆ ಸ್ವಾತಂತ್ರ್ಯ ಚಳವಳಿಯೇ ಆಗಬಹುದು. ಇಲ್ಲವೇ ಸಮಾಜಕ್ಕೆ ಉತ್ತಮ ಸಂದೇಶ ನೀಡುವುದಾಗಬಹುದು.

◆ **ಪಾತ್ರ ನೀವಾಗಲು ಸಿದ್ಧತೆಯನ್ನು ಹೇಗೆ ಮಾಡಿಕೊಳ್ಳುತ್ತೀರಿ?**

ಪಾತ್ರ ಯಾವುದೇ ಇರಲಿ. ಸೀನ್ ಪೇಪರ್ ನೋಡಿದ ತಕ್ಷಣ ಆ ಪಾತ್ರಕ್ಕೆ ಪರಕಾಯ ಪ್ರವೇಶಿಸಲು ಮನಸ್ಸು ಅಣಿಯಾಗುತ್ತದೆ. ದುಃಖದ ಸನ್ನಿವೇಶ ಒಂದು ಪಕ್ಷ ಇದ್ದರೆ, ಅಳು ಪ್ರಕಟಿಸಬೇಕು. ಅದಕ್ಕೆ ನಾನು ಸಿದ್ಧಳಾಗಿ ಸಹಜ ಅಳು ಬರುವಂತೆ ಮನಸು ಮಾಡಿಕೊಳ್ಳುತ್ತೇನೆ. ಸೀನ್ ಪೇಪರ್ ನೋಡಿ ಸೀದಾ ಹೋಗಿ ಅಭಿನಯಿಸಲು ಸಾಧ್ಯ ಇಲ್ಲ. ಆ ಸಂದರ್ಭವನ್ನು ನನ್ನೊಳಗೆ ಅಳವಡಿಸಿಕೊಂಡರೆ ಅದಕ್ಕೆ ನ್ಯಾಯ ಕೊಡಬಹುದು.

◆ **ನಟ–ನಟಿಯರಿಗೆ ಇರುವ ಸವಾಲು ಏನು?**

ಖಾಸಗಿ ಜೀವನ ಮತ್ತು ಒಲುಮೆಯಿಂದ ಅಪ್ಪಿದ ವೃತ್ತಿಯಲ್ಲಿ ಸಮತೋಲನವನ್ನು ಕಾಪಾಡಬೇಕಾಗುತ್ತದೆ. ನನ್ನ ಪ್ರಕಾರ ಈ ಕ್ಷೇತ್ರವನ್ನು ಪ್ರೀತಿಸಿ ಬಂದ ಮೇಲೆ ಶ್ರದ್ಧೆಯಿಂದ ಕೆಲಸ ಮಾಡಬೇಕು. ಅದೇ ನಮ್ಮನ್ನು ಕಾಪಾಡಬೇಕು. ಕೆಲವೊಂದು ಪಾತ್ರಗಳನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಕೆಲವೊಂದು ಪಾತ್ರಗಳು ನಮಗೆ ಹೋಲಿಕೆಯಾಗುತ್ತವೆ. ಉದಾಹರಣೆಗೆ 'ದುರ್ಗಾ' ಪಾತ್ರ ನನಗೆ ಒಂದಿಷ್ಟು ಹೋಲಿಕೆ ಆಗುತ್ತೆ ಎಂದು ಅನ್ನಿಸುತ್ತದೆ.

◆ **ನಿಮ್ಮ ಕುಟುಂಬ ಟೀವಿ ಕುಟುಂಬದ ನಡುವಿನ ಸೇತು ಹೇಗೆ ಬೆಸೆಯುತ್ತೀರಿ?**

ಈಚೆಗೆ ಮದುವೆಯಾಗಿ ಬೆಂಗಳೂರಿಗೆ ಬಂದಿದ್ದೇನೆ. ಅಪ್ಪ–ಅಮ್ಮ ಊರಲ್ಲಿ ಇದ್ದಾರೆ. ಅಮ್ಮ–ಅಪ್ಪನನ್ನು ಮಿಸ್ ಮಾಡಿಕೊಂಡೆ ಅಂತ ಈ ಪಾತ್ರದ ಕೆಲ ಸನ್ನಿವೇಶದಲ್ಲಿ ಕಾಡುತ್ತದೆ. ನಮ್ಮ ಮನೆಯಲ್ಲಿ ನಡೆದ ಘಟನೆಗಳು ಇಲ್ಲಿ ಮರುಕಳಿಸುವಂತೆ ಭಾಸವಾಗುತ್ತದೆ. ತೆಲುಗಿನಲ್ಲಿಯೂ ಮಾಡುತ್ತಿದ್ದೇನೆ. ಊರು ಬಿಟ್ಟು ಒಂದೊಂದು ವಾರ ಇರಬೇಕು. ಅಲ್ಲಿ ತಿಂಡಿ–ಊಟ ಹೊಂದಾಣಿಕೆ ಕಷ್ಟ ಆಗುತ್ತದೆ. ಕೆಲವೊಮ್ಮೆ ಒಂಟಿತನ ಕಾಡುತ್ತದೆ. ಏನೋ ಒಂದು ಮಾಡಬೇಕು ಎಂದು ಬಂದಾಗ ಸಣ್ಣಪುಟ್ಟ ತ್ಯಾಗ ಅನಿವಾರ್ಯ. ಅತ್ತೆ, ಮಾವ, ಮೈದುನ ತುಂಬ ಸಪೋರ್ಟ್ ಮಾಡುತ್ತಾರೆ. ಎರಡು ಧಾರಾವಾಹಿ ಇರುವುದರಿಂದ ನಿರಂತರ ಚಿತ್ರೀಕರಣ ಇದ್ದೇ ಇರುತ್ತದೆ. ಹಾಗೆಯೇ ಓಡಾಟ ಇದ್ದೇ ಇರುತ್ತದೆ. ಕೆಲವೊಮ್ಮೆ ತುಂಬ ಒತ್ತಡ ಅನ್ನಿಸುತ್ತದೆ. ನನ್ನ ಪತಿ ಸಾಗರ್ ಪುರಾಣಿಕ್, ಸಿನಿಮಾ ನಿರ್ದೇಶಕ.

■ **ರಾಘವೇಂದ್ರ ಕೆ.**